2017 ಕ.ತೀ.ವ 803

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

## ಶ್ರೀಮತಿ ಸುನಿಲ್ ಗುಪ್ತ (ಶ್ರೀಮತಿ ಕೆ.ಎಸ್. ಅರ್ಚನಾ ಗುಪ್ತ) –ವಿರುದ್ಧ– ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಠಾಣಾಧಿಕಾರಿ, ಮಹದೇವಪುರ ಪೋಲೀಸ್ ಠಾಣೆ, ಬೆಂಗಳೂರು ಮತ್ತು ಇನ್ನೊಬ್ಬರು*

ಭಾರತ ಸಂವಿಧಾನದ 227ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣ.

ಭಾರತೀಯ ಆಯುಧಗಳ ಅಧಿನಿಯಮ, 1959ರ 27ನೇ ಪ್ರಕರಣ.

ಈ ರಿಟ್ ಅರ್ಜಿಯಲ್ಲಿನ ಅರ್ಜಿದಾರರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು, ಸೆಷನ್ಸ್ ವ್ಯಾಪ್ತಿಯಲ್ಲಿ ಪಡೆದುಕೊಳ್ಳಬೇಕೆಂಬ ಮ್ಯಾಜಿಸ್ಟ್ರೇಟರ ನಿರ್ದೇಶನವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ. ಆಪಾದಿತ/ಅರ್ಜಿದಾರರು ತಮ್ಮ ಭೂ ಒತ್ತುವರಿ ಸಂಬಂಧ ನಡೆಯಬಹುದಾದ ಮುಂದಿನ ಅನಿರೀಕ್ಷಿತ ಹಾಗೂ ಆಕಸ್ಮಿಕ ಗಲಭೆಗಳಿಂದ ರಕ್ಷಿಸಿಕೊಳ್ಳಲು ಆತ್ಮರಕ್ಷಣೆಗಾಗಿ ಮಚ್ಚನ್ನು ಹಿಡಿದುಕೊಂಡಿದ್ದು, ಈ ಕೃತ್ಯವು ಭಾರತೀಯ ಆಯುಧಗಳ ಅಧಿನಿಯಮದ 27ನೇ ಪ್ರಕರಣದ ಅಡಿಯಲ್ಲಿ ಬರುತ್ತದೆಯೇ ಎಂಬುದು ಇಲ್ಲಿನ ಮುಖ್ಯ ಪ್ರಶ್ನೆಯಾಗಿದೆ.

ಆದುದರಿಂದ ಅಂಥ ಆಯುಧಗಳನ್ನು (ಅಸ್ತ್ರಗಳನ್ನು) ಆಯುಧಗಳಂತೆ ಮತ್ತು ನಿರ್ದಿಷ್ಟವಾಗಿ ಪರಿಗಣಿಸದಿರಲು ಇದು ಸ್ಪಷ್ಟಪಡಿಸುತ್ತದೆ. ಇದರಿಂದ ಪ್ರಸ್ತುತ ಮೊಕದ್ದಮೆಯಲ್ಲಿ ಆಪಾದಿತರು ತಮ್ಮ ಕೈಯಲ್ಲಿ ಹಿಡಿದ 'ಮಚ್ಚು' ಆಯುಧವನ್ನು ಸಹ ಬಂದೂಕುಗಳ ಪರಿಭಾಷೆಯ ಅಡಿಯಲ್ಲಿ ತರಲು ಸಾಧ್ಯವಾಗುವುದಿಲ್ಲ ಎಂದು ಕಂಡುಬರುತ್ತದೆ. ತತ್ಪರಿಣಾಮವಾಗಿ ಪ್ರಸ್ತುತ ಮೊಕದ್ದಮೆಯಲ್ಲಿ ಆಯುಧಗಳ ಅಧಿನಿಯಮ, 1959 ಅನ್ವಯವಾಗುವುದಿಲ್ಲ.

*ರಿಟ್ ಅರ್ಜಿ ಸಂಖ್ಯೆ: 48585/2016 (ಜಿಎಂ–ಆರ್ಇಎಸ್), ದಿನಾಂಕ: 29ನೇ ಸೆಪ್ಟೆಂಬರ್, 2016.

**ಆಯುಧಗಳ ಅಧಿನಿಯಮದ 27ನೇ ಪ್ರಕರಣವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾಡಿದ ಪ್ರಾರ್ಥನೆಯಾಗಿರುವುದರಿಂದ, ಅರ್ಜಿದಾರರ ಜಾಮೀನು ಅರ್ಜಿಯನ್ನು ಅದರಂತೆ ನಿರಾಕರಿಸುವುದಕ್ಕೆ ಮ್ಯಾಜಿಸ್ಟ್ರೇಟರು ಪೂರ್ವ ನಿರ್ಧರಿತರಾಗತಕ್ಕದ್ದಲ್ಲ. ಮ್ಯಾಜಿಸ್ಟ್ರೇಟರು ಜಾಮೀನು ಅರ್ಜಿಯನ್ನು ಪರಿಗಣಿಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಗಮನಕ್ಕೆ ತಂದುಕೊಳ್ಳದೆ ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರಾರ್ಥನೆಯನ್ನು ಮಾತ್ರವೇ ಗಮನದಲ್ಲಿಟ್ಟುಕೊಳ್ಳತಕ್ಕದ್ದು. ಆಯುಧಗಳ ಅಧಿನಿಯಮದ 27ನೇ ಪ್ರಕರಣವು ಎಲ್ಲರಿಗೂ ಅನ್ವಯವಾಗುತ್ತದೆಯೇ ಎಂಬ ಪ್ರಶ್ನೆಯನ್ನು ನಂತರದ ಹಂತದಲ್ಲಿ ನ್ಯಾಯಾಲಯದಲ್ಲಿ ಪರಿಗಣಿಸುವುದಕ್ಕಾಗಿ ಮುಕ್ತವಾಗಿರುತ್ತದೆ.**

**ಅರ್ಜಿಯನ್ನು ವಿಲೆ ಮಾಡಿದೆ.**

ಅರ್ಜಿದಾರರ ಪರ: ಶ್ರೀ ಪಿ. ಪ್ರಸನ್ನ ಕುಮಾರ್, ವಕೀಲರು,
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಆರ್. ಕೇಶವ್ ಮೂರ್ತಿ,
ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ – II.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಆನಂದ ಬೈರಾರೆಡ್ಡಿ:**

ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದವನ್ನು ಆಲಿಸಲಾಗಿದೆ.

2. ಅರ್ಜಿದಾರರ ಪರವಾಗಿ ನ್ಯಾಯವಾದಿಗಳು ಈ ಮೂಲಕ ಕ್ಲೇಮು ಮಾಡಿದ ಪರಿಹಾರದ ವಾದಾಂಶವೆಂದರೆ, ಜಪ್ತಿ ಮಾಡಿರುವ ವಾಹನವನ್ನು ಬಿಡುಗಡೆಗೊಳಿಸಲು ಈ ಅರ್ಜಿಯಲ್ಲಿ ಕೋರಿರುತ್ತಾರೆ. ಅವರು ಸಂಬಂಧಪಟ್ಟ ಅಂಥ ಪರಿಹಾರದ ಮಟ್ಟಿಗೆ ಅರ್ಜಿಯನ್ನು ಹಿಂಪಡೆಯಲು ಅದರೊಂದಿಗೆ ಮ್ಯಾಜಿಸ್ಟ್ರೇಟರ ಹತ್ತಿರ ಹೋಗುವುದಕ್ಕೆ ಸ್ವಾತಂತ್ರವನ್ನು ಕೋರಿರುತ್ತಾರೆ.

3. ಅರ್ಜಿದಾರರು ಈ ನ್ಯಾಯಾಲಯದ ನಿರ್ದೇಶನಕ್ಕೆ ಅನುಸಾರವಾಗಿ ಜಾಮೀನು ಕೋರಲು ಮ್ಯಾಜಿಸ್ಟ್ರೇಟರ ಹತ್ತಿರ ಹೋಗುವುದೇ ಎಂಬುದು ಅವರ ಎರಡನೇ ವಾದಾಂಶವಾಗಿರುತ್ತದೆ. ಈ ವಿಷಯದ ಸಂಬಂಧದಲ್ಲಿ ಅರ್ಜಿಯನ್ನು ಈ ಮೂರು ಸನ್ನಿವೇಶಗಳಲ್ಲಿ ಮುಂದೂಡಲಾಗಿರುತ್ತದೆ. ಅಂತಿಮವಾಗಿ, ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ತಮ್ಮ ಆಕ್ಷೇಪಗಳನ್ನು ದಾಖಲಿಸುವುದಕ್ಕೆ ತಿಳಿಸಲಾಯಿತು ಮತ್ತು 6.10.2016ರಂದು ಮುಂದಿನ ಸುನಾವಣೆಗಾಗಿ ವಿಷಯವನ್ನು ಮಂಡಿಸಲು ತಿಳಿಸಲಾಗಿದೆ. ಪ್ರಾಸಂಗಿಕವಾಗಿ ಮತ್ತೊಬ್ಬ ಆಪಾದಿತನ ಸಂಬಂಧದಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ಭಾರತೀಯ ಆಯುಧಗಳ ಅಧಿನಿಯಮ, 1959ರ 27ನೇ ಪ್ರಕರಣವನ್ನು ಪರಾಮರ್ಶಿಸಬೇಕೆಂದು ಕೋರಿದ್ದಾರೆ, ಇದನ್ನು ಸೆಷೆನ್ಸ್ ನ್ಯಾಯಾಲಯವು ವಿಚಾರಣೆ ಮಾಡಬೇಕಾದ ಮೊಕದ್ದಮೆಯಾಗಿರುತ್ತದೆ. ಆದುದರಿಂದ, ಅವನ ಜಾಮೀನು ಅರ್ಜಿಯನ್ನು ಪರಿಗಣಿಸುವುದಕ್ಕೆ ಅವರು ಸಕ್ಷಮವಾಗಿರುವುದಿಲ್ಲ ಎಂಬುದು ಕಂಡು ಬಂದಿರುವುದರಿಂದ ಅವನ ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ. ಅರ್ಜಿದಾರರು ಬಂಧನಕ್ಕೊಳಪಡುವ ಸಂಶಯದಿಂದ ತಮ್ಮ ಜಾಮೀನು ಅರ್ಜಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಇತ್ಯರ್ಥದಲ್ಲಿರುತ್ತದೆ. ಆ ಜಾಮೀನು ಅರ್ಜಿಯು ಅದೇ ರೀತಿಯಲ್ಲಿ ವಜಾಗೊಂಡಿರುತ್ತದೆ. ಆದುದರಿಂದ, ಆದೇಶದಲ್ಲಿ ಪರಾಮರ್ಶಿಸಲು ಕೋರಿ ಪ್ರಾರ್ಥಿಸಲಾದ ಭಾರತೀಯ ಆಯುಧಗಳ ಅಧಿನಿಯಮದ 27ನೇ ಪ್ರಕರಣವನ್ನು, ಸೆಷೆನ್ಸ್ ನ್ಯಾಯಾಲಯದ ನೆಪವನ್ನು ಈ ಮೊಕದ್ದಮೆಗೆ ನೀಡಿರುವುದರಿಂದ ಅವುಗಳನ್ನು ಪರಿತ್ಯಜಿಸಲು ನ್ಯಾಯವಾದಿಗಳು ಅರ್ಜಿದಾರರ ಪರವಾಗಿ ಕೋರಿದ್ದಾರೆ.

ಈ ಸಂಬಂಧದಲ್ಲಿ ನ್ಯಾಯವಾದಿಗಳು ಅರ್ಜಿದಾರರ ಆಪಾದನೆಗಳ ವಿರುದ್ಧದ ಘಟಕಾಂಶವಾಗಿರುವ ಅರ್ಜಿದಾರರು ಬೆಂಗಳೂರಿನ ವರ್ತೂರು ಹೋಬಳಿಯ ಹೂಡಿ ಗ್ರಾಮದ ಸರ್ವೆ ನಂ.132/4 ಸಂಖ್ಯೆಯಲ್ಲಿನ 38 ಗುಂಟೆ ಸ್ವತ್ತನ್ನು ಕಾಮನ್ ಹೊಲ್ಡಿಂಗ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಅಡಿಯಲ್ಲಿ ಸ್ವತ್ತಿಗೆ ಮಾಲೀಕರಾಗಿರುವೆವೆಂದು ತಿಳಿಸಿರುವರು. ಎರಡನೇ ಪ್ರತ್ಯರ್ಜಿದಾರರಾದ ನಿವೃತ್ತ ಪೊಲೀಸ್ ಸಹಾಯಕ ಆಯುಕ್ತರು ಪ್ರಸ್ತುತ ಒಂದು ಪ್ರೈವೇಟ್ ಡೆವಲಪರ್ ಆಗಿರುವ ವಾಸ್ವಾನಿ ವೈಟ್ ಫೀಲ್ಡ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಅದರ ಸಂಪರ್ಕ ವಿಭಾಗದ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಲು

ನಿಯೋಜಿತರಾಗಿರುವುದು ತಿಳಿದು ಬರುತ್ತದೆ ಮತ್ತು ಸದರಿ ಕಂಪನಿಯಲ್ಲಿ ವರ್ತೂರು ಹೋಬಳಿಯ ಹೂಡಿ ಗ್ರಾಮದಲ್ಲಿ ಸರ್ವೆ ನಂ.132/1, 132/2, 132/3 ಮತ್ತು 132/4 ಭಾಗದಲ್ಲಿರುವ ಭೂಮಿಯನ್ನು ಅಭಿವೃದ್ಧಿಪಡಿಸುತ್ತಿದೆ ಮತ್ತು ಹಾಗೆ ಅಭಿವೃದ್ಧಿ ಪಡಿಸುತ್ತಿರುವ ಸದರಿ ಭೂಮಿಯೂ ಅರ್ಜಿದಾರರ ಸ್ವಾಧೀನದಲ್ಲಿರುವ ಸ್ವತ್ತಿಗೆ ಲಗತ್ತಾಗಿಯೇ ಇರುವುದನ್ನು ಮಾಹಿತಿಯಲ್ಲಿ ತಿಳಿಸಿರುತ್ತಾರೆ. ಸರ್ವೆ ನಂ.132/1ರಲ್ಲಿ ಇರುವ ಬಂಡಿಗಾಡಿ ರಸ್ತೆಯೂ ಈಗ ಬೆಂಗಳೂರು ನಗರ ಮತ್ತು ವೈಟ್ ಫೀಲ್ಡ್‌ಗೆ ಸಂಪರ್ಕಿಸುವ ಪ್ರಧಾನ ರಸ್ತೆ ಮಾರ್ಗವಾಗಿರುವುದು ತಿಳಿದುಬಂದಿದೆ. ಪ್ರದೇಶಾಭಿವೃದ್ಧಿಯ ದೃಷ್ಟಿಯಲ್ಲಿ ಬಂಡಿಗಾಡಿಯ ರಸ್ತೆಯು ಅಗಲೀಕರಣಗೊಂಡಿದೆ ಮತ್ತು ಆ ರಸ್ತೆಯೇ ಈಗ ಐಟಿಪಿಎಲ್ ಮುಖ್ಯರಸ್ತೆಯಾಗಿರುವುದು ತಿಳಿದುಬಂದಿರುತ್ತದೆ. ಅಗಲೀಕರಣಗೊಂಡ ನಂತರ, ಆ ರಸ್ತೆಯು 92 ಅಡಿ ಅಗಲದ ವಿಸ್ತೀರ್ಣದ ರಸ್ತೆಯಾಗಿರುತ್ತದೆ. ಈ ಅಗಲೀಕರಣದ ಕಾರಣದಿಂದಲೇ ಆ ರಸ್ತೆಯು ಮುಖ್ಯ ರಸ್ತೆಯಾಗಿ ರೂಪುಗೊಂಡಿದೆ, ಮೇಲೆ ನಮೂದಿಸಿರುವ ಎರಡನೇ ಪ್ರತ್ಯರ್ಜಿದಾರನ ಕಂಪನಿಯೂ ಇದರಿಂದ 19 ಗುಂಟೆಗಳ ಭೂಮಿಯೂ ಕಳೆದುಕೊಂಡಿದೆ. ಇದರ ಪರಿಣಾಮವಾಗಿಯೇ ಎರಡನೇ ಪ್ರತ್ಯರ್ಜಿದಾರನು ಅವನು ತನ್ನ ಸ್ವತ್ತನ್ನು ಭೌತಿಕವಾಗಿ ಹಿಂದಕ್ಕೆ ತಳ್ಳುವ ಪ್ರಯತ್ನ ಮಾಡಿದ ಪರಿಣಾಮವಾಗಿ ಅದು ಅರ್ಜಿದಾರರ ಭೂಮಿಯು ಒತ್ತುವರಿಗೆ ಕಾರಣವಾಗಿದೆ. ಇದು ಅರ್ಜಿದಾರ ಮತ್ತು ಪ್ರತ್ಯರ್ಜಿದಾರರ ಆ ಯಾವುದೇ ವಿವಾದದ ವಸ್ತು ವಿಷಯವಾಗಿದೆ.

4. ಪ್ರತ್ಯರ್ಜಿದಾರವಾದ ಕಂಪನಿ ತನ್ನ ಪರವಾಗಿ ಯಥಾ ಸ್ಥಿತಿಯ ಆದೇಶವನ್ನು ಪಡೆದು ಕೊಂಡ ಕಾರಣ ಅದು ಎರಡನೇ ಪ್ರತ್ಯರ್ಜಿದಾರ ಸಕ್ರಿಯವಾಗಿರುವ 100 ರೌಡಿಗಳ ಸಹಾಯದೊಂದಿಗೆ ಎರಡನೇ ಪ್ರತ್ಯರ್ಜಿದಾರ ಕಂಪನಿಯು ಆ ಭಾಗದಲ್ಲಿ ಬೇಲಿಯನ್ನು ಹಾಕುವ ಸಂದರ್ಭದಲ್ಲಿ ಅರ್ಜಿದಾರರು ತಮ್ಮ ಭೂಮಿಯಲ್ಲಿ ಆದ ಅಂಥ ಒತ್ತುವರಿಯನ್ನು ಪ್ರತಿಭಟಿಸುವ ಸಲುವಾಗಿ ಅರ್ಜಿದಾರರ ತಮ್ಮ ಕೈಯಲ್ಲಿ ಮಚ್ಚಿನಂತಹ ಆಯುಧವನ್ನು ಹಿಡಿದಿರುವುದು ವಾಸ್ತವವಾಗಿರುತ್ತವೆ. ಸಾಕಷ್ಟು ಜನರ ಗುಂಪು ತಮ್ಮ ಮೇಲೆ ಆಕ್ರಮಣ ಮಾಡಬಹುದು ಎಂಬ ಕಾರಣದಿಂದ

ಅರ್ಜಿದಾರರು ತಮ್ಮ ಆತ್ಮರಕ್ಷಣೆಗಾಗಿ ಹಾಗೆ ಮಾಡಿರುತ್ತಾರೆ ಮತ್ತು ಸಾಕಷ್ಟು ಜನರ ಗುಂಪು ಅರ್ಜಿದಾರರನ್ನು ಭಯಪಡಿಸಿ ಭೂಮಿಯನ್ನು ಸಮ ಮಾಡಿ ಬೇಲಿಯನ್ನು ಹಾಕಿರುತ್ತಾರೆ. ಅರ್ಜಿದಾರರೇ ಭೂಮಿಯ ರಕ್ಷಣೆಗೆ ನಿಂತಿದ್ದರು ಮತ್ತು ಒತ್ತುವರಿಯನ್ನು ಪ್ರತಿಭಟಿಸಿದರು ಅವರಿಂದ ಒತ್ತುವರಿಯನ್ನು ತಡೆಯಲು ಅವರಿಗೆ ಸಾಧ್ಯವಾಗಿರುವುದಿಲ್ಲ.

ಆದಾಗ್ಯೂ, ಅರ್ಜಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯೂ ದಾಖಲಾಗಿರುತ್ತದೆ. ಅರ್ಜಿದಾರರ ಮೇಲೆ ಭಾರತ ದಂಡ ಸಂಹಿತೆ 1860ರ 143, 147, 148, 504, 506, 149ನೇ ಪ್ರಕರಣದ ಮೇರೆಗೆ, ಭಾರತೀಯ ಆಯುಧಗಳ ಅಧಿನಿಯಮ, 1959ರ 27ನೇ ಪ್ರಕರಣ ಮತ್ತು ಓದಿಕೊಳ್ಳುವುದರೊಂದಿಗೆ ಅರ್ಜಿದಾರರ ದಂಡನೀಯ ಅಪರಾಧಕ್ಕಾಗಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿರುತ್ತದೆ. ಆದುದರಿಂದ ಅರ್ಜಿದಾರರು ನಿರೀಕ್ಷಣಾ ಜಾಮೀನಿಗಾಗಿ ಕೋರಿ ಈ ನ್ಯಾಯಾಲಯವನ್ನು ಪ್ರಾರಂಭಿಕವಾಗಿ ಸಂಪರ್ಕಿಸಿರುತ್ತಾರೆ. ಅರ್ಜಿದಾರರಿಗೆ ಮ್ಯಾಜಿಸ್ಟ್ರೇಟರನ್ನು ಸಂಪರ್ಕಿಸುವಂತೆ ನಿರ್ದೇಶಿಸಿರುತ್ತದೆ. ಆಗ ಅರ್ಜಿದಾರರು ಮ್ಯಾಜಿಸ್ಟ್ರೇಟರನ್ನು ಸಂಪರ್ಕಿಸಿರುತ್ತಾರೆ. ಮ್ಯಾಜಿಸ್ಟ್ರೇಟರು ಮೇಲಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಪ್ರಸ್ತುತ ಅರ್ಜಿಯಲ್ಲಿ ಕೆಟ್ಟ ಪರಿಣಾಮವನ್ನುಂಟು ಮಾಡುವ ಆಯುಧಗಳ ಅಧಿನಿಯಮದ 27ನೇ ಪ್ರಕರಣವನ್ನು ಬಿಟ್ಟುಬಿಡುವಂತೆ ಪ್ರಾರ್ಥಿಸಿ ಅರ್ಜಿಯನ್ನು ದಾಖಲಿಸಿರುತ್ತಾರೆ. ಹೀಗೆ ಅರ್ಜಿದಾರರು ಅರ್ಜಿಯನ್ನು ದಾಖಲಿಸಲು ಅವರು ಸೆಷನ್ಸ್ ನ್ಯಾಯಾಲಯದ ಮುಂದೆ ವಿಚಾರಣೆ ಗೊಳಪಟ್ಟಿರುವುದನ್ನು ಖಚಿತಪಡಿಸಲು ಮಾತ್ರವೇ ಮತ್ತು ಈ ಮೊಕದ್ದಮೆ ತುಂಬ ಹೆಚ್ಚಿನ ಗಂಭೀರವಾದ ಸಂಕೀರ್ಣತೆಯನ್ನು ಹೊಂದಿರುವುದನ್ನು ತಿಳಿಸಲು ಅವರು ಈ ಅರ್ಜಿಯನ್ನು ದಾಖಲಿಸಿರುವರು.

5. ಮಾನ್ಯ ನ್ಯಾಯವಾದಿಗಳು ಆಯುಧಗಳ ಅಧಿನಿಯಮದ 4ನೇ ಪ್ರಕರಣದತ್ತ ಗಮನ ಸೆಳೆದು ಈ ಮುಂದಿನಂತೆ ವಾದ ಮಂಡಿಸಿರುವರು. ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಗುಂಡು ಹಾರಿಸುವ ಬಂದೂಕುಗಳನ್ನು ಹೊರತುಪಡಿಸಿ ಅನ್ಯಥಾ ಆಯುಧಗಳನ್ನು ಯಾವುದೇ ಪ್ರದೇಶದಲ್ಲಿ ಸನ್ನಿವೇಶಗಳ ಪ್ರಭಾವಕ್ಕೆ

ಒಳಗಾಗುವ ಸಂಬಂಧದಲ್ಲಿ ಅದು ಅವಶ್ಯಕವಾಗಿದ್ದರೆ ಮಾತ್ರವೇ ಅಥವಾ ಯುಕ್ತ ಸಾರ್ವಜನಿಕ ಹಿತಾಸಕ್ತಿಯಲ್ಲಿನ ಅದರ ಸ್ವಾಧೀನಕ್ಕೆ ಅನುಭೋಗ ಅಥವಾ ಕೊಂಡೊಯ್ಯುವುದನ್ನು ತಿಳಿಸುತ್ತದೆ. ಅಂತಹ ಆಯುಧಗಳನ್ನು ರಾಜಪತ್ರದಲ್ಲಿ ಕೇಂದ್ರ ಸರ್ಕಾರ ಅಧಿಸೂಚನೆ ಮೂಲಕ ನಿರ್ದೇಶಿಸಬಹುದು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಕ್ಕೆ ಈ ಪ್ರಕರಣವನ್ನು ಅನ್ವಯಿಸತಕ್ಕದ್ದು ಎಂದೂ ಸಹ ನಿರ್ದೇಶಿಸಬಹುದು. ಅಂಥ ಯಾವುದೇ ಅಧಿಸೂಚನೆಯ ಗೈರು ಹಾಜರಿಯಲ್ಲಿ ಮಚ್ಚು ಒಯ್ಯುವುದು ಗುಂಡು ಹಾರಿಸುವ ಬಂದೂಕು ಒಯ್ಯಲು ಇರುವಂಥ ಯಾವುದೇ ನಿರ್ಬಂಧಗಳು ಈ ಮಚ್ಚು ಒಯ್ಯುವುದಕ್ಕೆ ಇಲ್ಲದಿರುವುದರಿಂದ, ಈ ಮೊಕದ್ದಮೆಗೆ ಆಯುಧಗಳ ಅಧಿನಿಯಮ ಅನ್ವಯವಾಗುವುದಿಲ್ಲ ಎಂದು ವಾದವನ್ನು ಮಂಡಿಸಿರುವರು.

ಅವರು, ತಮ್ಮ ವಾದವನ್ನು ಮುಂದುವರೆಸುತ್ತಾ, ಪ್ರತಿಯೊಂದು ಪ್ರತ್ಯೇಕ ಮೊಕದ್ದಮೆಗಳಲ್ಲಿಯೂ ಈ ಪ್ರಕರಣವನ್ನು ತಾರ್ಕಿಕವಾಗಿ ಪ್ರಾರ್ಥಿಸಲಾಗಿದೆ. ಆಪಾದಿತರು ಯಾವುದೇ ಆಯುಧ, ಸ್ಥಿರ ಸ್ವರೂಪದ ಆಯುಧಗಳನ್ನು ಒಯ್ಯುವುದಕ್ಕೂ ಈ ಆಯುಧಗಳ ಅಧಿನಿಯಮದ ಅಂಶಗಳಲ್ಲೇ ಪ್ರಾರ್ಥಿಸಬೇಕೆಂದು ಆಪಾದಿತರಿಗೆ ಕಂಡು ಬಂದಿರುವುದರಿಂದ ಈ ಅಧಿನಿಯಮದಲ್ಲಿ ಪರಿಗಣಿಸಲು ಪ್ರಾರ್ಥಿಸಿರುತ್ತಾರೆ. ಆದುದರಿಂದ, ಪ್ರಸ್ತುತ ಮೊಕದ್ದಮೆಯಲ್ಲಿ ಅರ್ಜಿದಾರರ ಕೈಯಲ್ಲಿ ಹಿಡಿದಿರುವುದು ಬಂದೂಕಾಗಿರುವುದಿಲ್ಲ. ಅದು ಮಚ್ಚು ಆಗಿರುವುದು ಪುರಾವೆಯಾಗಿರುತ್ತದೆ. ಆದುದರಿಂದ ಈ ಮೊಕದ್ದಮೆಯಲ್ಲಿ ಆಯುಧಗಳ ಅಧಿನಿಯಮದಲ್ಲಿಯೇ ಪ್ರಾರ್ಥಿಸಲಾಗಿದೆ ಮತ್ತು ಈ ಕಾರಣದಿಂದಲೇ ಮ್ಯಾಜಿಸ್ಟ್ರೇಟರು ಸೃಜಿತವಾದ ಸನ್ನಿವೇಶದಲ್ಲಿ ಜಾಮೀನು ಅರ್ಜಿಯ ಭಾರೀ ಗಂಭೀರದ ಅರ್ಜಿಯಾಗಿ ಕಾಣಿಸಿಕೊಂಡಿದ್ದರಿಂದ ಮ್ಯಾಜಿಸ್ಟ್ರೇಟರು ಜಾಮೀನು ನೀಡಿರುವುದಿಲ್ಲ ಮತ್ತು ಈ ಕಾರಣದಿಂದ ಈ ಉಪಬಂಧವನ್ನು ಬಿಟ್ಟುಬಿಡಲು ಕೋರಲಾಗಿದೆ.

6. ಮಾನ್ಯ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಬಿಟ್ಟುಬಿಡಲು ಕೋರಿದ ಪ್ರಕರಣದ ಪ್ರಶ್ನೆಯನ್ನು ಅಂಗೀಕರಿಸಲು ಕೇಂದ್ರ ಸರ್ಕಾರವು ಕೆಲವು ನಿರ್ದಿಷ್ಟ ಪ್ರದೇಶಕ್ಕೆ ಅನ್ವಯಿಸಬಹುದಾದ ವಾಸ್ತವಿಕ ಅಧಿಸೂಚನೆಯನ್ನು

ಖಚಿತಪಡಿಸಿಕೊಳ್ಳುವುದಕ್ಕೆ ತಮ್ಮ ವಾದದಲ್ಲಿ ನಿವೇದಿಸಿರುವರು. ಅವರು ವಾದವನ್ನು ಮುಂದುವರೆಸುತ್ತಾ, ಯಾವುದೇ ಸಂದರ್ಭದಲ್ಲಿ, ವಸ್ತು ವಿಷಯದ ಈ ಅಂಶವನ್ನು ಕೆಳ ನ್ಯಾಯಾಲಯದಲ್ಲಿ ಪರಿಗಣಿಸುವ ಸಂಬಂಧದಲ್ಲಿ ಮತ್ತು ಜಾಮೀನು ಅರ್ಜಿಯಲ್ಲಿ ಪ್ರಾರಂಭಿಕ ಹಂತದಲ್ಲಿಯೇ ಇರುವಾಗಲೇ ಅರ್ಜಿದಾರರು ಪರಿಗಣಿಸುವುದಕ್ಕೆ ಪ್ರಾರ್ಥಿಸಿ ಪ್ರಥಮ ಮಾಹಿತಿ ವರದಿಯ ನಂತರದಲ್ಲಿ ವಾರೆಂಟ್ ಇಲ್ಲದೆ ಆಯುಧಗಳ ಅಧಿನಿಯಮದ ಉಪಬಂಧಗಳಲ್ಲಿ ವಿಚಾರಣೆ ಮಾಡುವುದಕ್ಕೆ ಪ್ರಾರ್ಥಿಸಿರುವರು.

7. ಮೊಕದ್ದಮೆಯಲ್ಲಿ, ಕೊಡಲಾದ ಸನ್ನಿವೇಶ ಸಂದರ್ಭಗಳ ದೃಷ್ಟಿಯಲ್ಲಿ ಮಹಿಳೆ ಯಾವುವೇ ಗುಂಡು ಹಾರಿಸುವ ಬಂದೂಕನ್ನು ಹಿಡಿಯದೆ "ಮಚ್ಚು" ಆಯುಧವನ್ನು ಹಿಡಿದಿರುವುದರಿಂದ ಆ ಮಹಿಳೆಯ ಮೇಲೆ ಯಾವ ರೀತಿಯ ಕ್ರಮ ಜರುಗಿಸಬೇಕು ಎಂಬ ಮೊಕದ್ದಮೆ ಇದಾಗಿರುವುದಿಲ್ಲ. ಇದು "ಮಚ್ಚು" ಅನ್ನು ಬಂದೂಕು ಎಂಬಂತೆ ಪರಿಗಣಿಸಬೇಕೇ ಎಂಬುದು ಈ ಮೊಕದ್ದಮೆಯ ಪ್ರಮುಖ ಪ್ರಶ್ನೆಯಾಗಿದೆ.

8. ಆಯುಧಗಳ ಅಧಿನಿಯಮದ ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆಗಳನ್ನು ಓದುವುದರಿಂದ ಅಧಿನಿಯಮವು 1878ನೇ ವರ್ಷದಷ್ಟು ಹಿಂದಿನದು ಎಂಬುದು ಸ್ಪಷ್ಟವಾಗುತ್ತದೆ. ಭಾರತೀಯ ಆಯುಧಗಳ ಅಧಿನಿಯಮ, 1878ನ್ನು ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದರು ಮತ್ತು ಇಡೀ ರಾಷ್ಟ್ರವನ್ನು ನಿರಸ್ತ್ರಗೊಳಿಸುವ ಉದ್ದೇಶಕ್ಕಾಗಿಯೇ ಈ ಅಧಿನಿಯಮವನ್ನು ಜಾರಿಗೊಳಿಸಿರುವುದು ಕಂಡು ಬರುತ್ತದೆ. ಸ್ವಾತಂತ್ರ್ಯ ನಂತರದಲ್ಲೂ, ಕಾನೂನು ಕತ್ತಿಗಳು, ಡ್ರಾಗರ್‌ಗಳು, ಭರ್ಜಿಗಳು, ಚೂಪಾದ ಭರ್ಜಿಗಳು, ಬಿಲ್ಲು ಮತ್ತು ಬಾಣಗಳನ್ನು "ಆಯುಧಗಳು" ಎಂಬಂತೆ ಶಾಸನದಲ್ಲಿ ಬದಲಾಯಿಸದೆ ಮುಂದುವರೆಯಲು ಅನುಮತಿಸಲಾಗಿದೆ. ಕಾನೂನು ಪಾಲಿಸುವುದಕ್ಕಾಗಿ ಸಾರ್ವಜನಿಕರು ತಮ್ಮ ಆತ್ಮರಕ್ಷಣೆ, ಮುಂತಾದವುಗಳಿಗಾಗಿ ಬಂದೂಕುಗಳನ್ನು ಸ್ವಾಧೀನತೆಗೆ ತೆಗೆದುಕೊಳ್ಳುವುದು ಈ ಕಾಠಿಣ್ಯತೆಯಿಂದ ಕೂಡಿದ ಆಯುಧಗಳ ಅಧಿನಿಯಮವು ಅದನ್ನು ಮತ್ತಷ್ಟು ಕಷ್ಟಕರವಾಗಿಸಿದೆ. ಆದುದರಿಂದ ಭಾರತೀಯ ಆಯುಧಗಳ (ತಿದ್ದುಪಡಿ) ಮಸೂದೆ, 1953 ಮೂಲಕ ಅಧಿನಿಯಮವನ್ನು

ತಿದ್ದುಪಡಿ ಮಾಡಲಾಯಿತು. ಈ ಮಸೂದೆಯಲ್ಲಿ ಚಾಕು–ಚೂರಿ, ಭರ್ಜಿಗಳು, ಬಿಲ್ಲು ಮತ್ತು ಬಾಣಗಳು ಮತ್ತು ಅಂತಹ ಆಯುಧಗಳನ್ನು ನಿರ್ದಿಷ್ಟ ಉದ್ದೇಶಗಳಿಗಾಗಿ "ಆಯುಧಗಳು" ಎಂಬ ಪರಿಭಾಷೆಯಿಂದ ಬಿಟ್ಟುಬಿಡಲಾಗಿದೆ ಎಂದು ಅಧಿನಿಯಮಿಸಿದೆ.

ಆದುದರಿಂದ ಅಂಥ ಆಯುಧಗಳನ್ನು (ಅಸ್ತ್ರಗಳನ್ನು) ಆಯುಧಗಳಂತೆ ಮತ್ತು ನಿರ್ದಿಷ್ಟವಾಗಿ ಪರಿಗಣಿಸದಿರಲು ಇದು ಸ್ಪಷ್ಟಪಡಿಸುತ್ತದೆ. ಇದರಿಂದ ಪ್ರಸ್ತುತ ಮೊಕದ್ದಮೆಯಲ್ಲಿ ಆಪಾದಿತರು ತಮ್ಮ ಕೈಯಲ್ಲಿ ಹಿಡಿದ "ಮಚ್ಚು" ಆಯುಧವನ್ನು ಸಹ ಬಂದೂಕುಗಳ ಪರಿಭಾಷೆಯ ಅಡಿಯಲ್ಲಿ ತರಲು ಸಾಧ್ಯವಾಗುವುದಿಲ್ಲ ಎಂದು ಕಂಡುಬರುತ್ತದೆ. ತತ್ಪರಿಣಾಮವಾಗಿ ಪ್ರಸ್ತುತ ಮೊಕದ್ದಮೆಯಲ್ಲಿ ಆಯುಧಗಳ ಅಧಿನಿಯಮ, 1959 ಅನ್ವಯವಾಗುವುದಿಲ್ಲ.

ಆದಾಗ್ಯೂ, ಅರ್ಜಿದಾರರ ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸುತ್ತಾ, ಈ ಅಂಶದ ಮೇಲೆ ಮತ್ತಷ್ಟು ಬೆಳಕು ಚೆಲ್ಲುತ್ತಾ ವಾದವನ್ನು ಈ ಮುಂದಿನಂತೆ ಮಂಡಿಸಿರುವರು, ಗಲಭೆ ಪ್ರದೇಶದಲ್ಲಿ ಇಂತಹ ಆಯುಧಗಳ ಬಳಕೆಯನ್ನು ನಿರ್ಬಂಧಿಸಿದೆ. ಅಂದರೆ ಈ ಸಂಬಂಧದಲ್ಲಿ ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದಂತಹ ಗಲಭೆ ಪ್ರದೇಶದಲ್ಲಿ ಯಾರೊಬ್ಬರು ಚಾಕು – ಚೂರಿ ಅಥವಾ ಕತ್ತಿ ಅಥವಾ ಅಂಥ ಯಾವುವೇ ಉದ್ದೇಶಕ್ಕಾಗಿ ಬಳಸುವ ಮಾರಕಾಸ್ತ್ರಗಳನ್ನು ಒಳಗೊಂಡಂತೆ ಯಾವುದೇ ಬಗೆಯ ಆಯುಧಗಳನ್ನು ಒಯ್ಯುವುದು, ಬಳಸುವುದಕ್ಕೆ ಅಧಿಸೂಚನೆಯಲ್ಲಿ ನಿಷೇಧಿಸಿ ಜಾರಿ ಮಾಡಿರುತ್ತದೆ ಎಂದು ತಮ್ಮ ವಾದಾಂಶದಲ್ಲಿ ಎತ್ತಿ ಹಿಡಿಯುತ್ತಾರೆ. ಆದುದರಿಂದ ಮ್ಯಾಜಿಸ್ಟ್ರೇಟರು ಜಾಮೀನು ಅರ್ಜಿಯಲ್ಲಿ ಆಯುಧಗಳ ಅಧಿನಿಯಮದ 27ನೇ ಪ್ರಕರಣದ ಮೂಲಕ ಪ್ರಾರ್ಥಿಸಿರುವುದರಿಂದ ಅವರು ಜಾಮೀನು ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ಆಯುಧಗಳ ಅಧಿನಿಯಮದ 27ನೇ ಪ್ರಕರಣದ ದೃಷ್ಟಿಯಲ್ಲಿ ಮಾಡಿದ ಪ್ರಾರ್ಥನೆಯಾಗಿರುವುದರಿಂದ, ಅರ್ಜಿದಾರರ ಜಾಮೀನು ಅರ್ಜಿಯನ್ನು ಅದರಂತೆ ನಿರಾಕರಿಸುವುದಕ್ಕೆ ಮ್ಯಾಜಿಸ್ಟ್ರೇಟರು ಪೂರ್ವ

ನಿರ್ಧರಿತರಾಗತಕ್ಕದ್ದಲ್ಲ. ಮ್ಯಾಜಿಸ್ಟ್ರೇಟರು ಜಾಮೀನು ಅರ್ಜಿಯನ್ನು ಪರಿಗಣಿಸುವುದಕ್ಕೆ ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಗಮನಕ್ಕೆ ತಂದುಕೊಳ್ಳದೆ ಈ ಪ್ರಕರಣದ ಪ್ರಾರ್ಥನೆಯನ್ನು ಮಾತ್ರವೇ ಗಮನದಲ್ಲಿಟ್ಟುಕೊಳ್ಳತಕ್ಕದ್ದು. ಆಯುಧಗಳ ಅಧಿನಿಯಮದ 27ನೇ ಪ್ರಕರಣವು ಎಲ್ಲರಿಗೂ ಅನ್ವಯವಾಗುತ್ತದೆಯೇ ಎಂಬ ಪ್ರಶ್ನೆಯನ್ನು ನಂತರದ ಹಂತದಲ್ಲಿ ನ್ಯಾಯಾಲಯದಲ್ಲಿ ಪರಿಗಣಿಸುವುದಕ್ಕಾಗಿ ಮುಕ್ತವಾಗಿರುತ್ತದೆ. ಅರ್ಜಿಯನ್ನು ವಿಲೆ ಮಾಡಿದೆ.

ತತ್ಪರಿಣಾಮವಾಗಿ ಐ.ಎ.1/2016ನ್ನು ವಿಲೇ ಮಾಡಲಾಗಿದೆ.

ಈ ಆದೇಶದ ಪ್ರತಿಯನ್ನು ಮಾನ್ಯ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಒದಗಿಸುವುದು.